# ಮೈಸೂರು ವಾರಿಯರ್ಸ್ ಪ್ರತಿಭೆ ಅನ್ವೇಷಣೆಯಲ್ಲಿ ಇಬ್ಬರು ಆಟಗಾರರು ಆಯ್ಕೆ

- **ಮೈಸೂರಿನ ಉತ್ತಮ್ ಅಯ್ಯಪ್ಪ ಮತ್ತು ಚೇತನ್ ಎಲ್‌ಆರ್ ಆಯ್ಕೆ**
- **2019 ರ ಕೆಪಿಎಲ್ ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿರುವ ಆಟಗಾರರು**

ಮೈಸೂರು, ಜುಲೈ 30, 2019: ಮೈಸೂರು ವಾರಿಯರ್ಸ್‌ನ ಮಾಲೀಕ ಸಂಸ್ಥೆಯಾಗಿರುವ ಎನ್‌ಆರ್ ಗ್ರೂಪ್ 2019 ನೇ ಸಾಲಿನ ಕೆಪಿಎಲ್‌ಗೆ ಪ್ರತಿಭೆ ಅನ್ವೇಷಣೆ ಕಾರ್ಯಕ್ರಮದಲ್ಲಿ ತಳಮಟ್ಟದ ಇಬ್ಬರು ಆಟಗಾರರನ್ನು ಆಯ್ಕೆ ಮಾಡಿದೆ. ಸಹ ಪ್ರಾಯೋಜಕ ಸಂಸ್ಥೆಯಾಗಿರುವ ಸೈಕಲ್ ಪ್ಯೂರ್ ಅಗರಬತ್ತೀಸ್ ಜತೆ ಸೇರಿ ಎನ್‌ಆರ್ ಗ್ರೂಪ್ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಉತ್ತಮ ಕ್ರಿಕೆಟ್ ಆಟಗಾರರನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಎರಡು ಹಂತಗಳ ಪ್ರತಿಭಾ ಅನ್ವೇಷಣೆಯನ್ನು ನಡೆಸಿತ್ತು. ಇದರಲ್ಲಿ ಉತ್ತಮ್ ಅಯ್ಯಪ್ಪ ಮತ್ತು ಚೇತನ್ ಎಲ್.ಆರ್. ಅವರನ್ನು ಮೈಸೂರು ವಾರಿಯರ್ಸ್ ತಂಡಕ್ಕೆ ಆಯ್ಕೆ ಮಾಡಲಾಯಿತು. ಈ ಮೂಲಕ ಇವರಿಬ್ಬರೂ ಆಟಗಾರರು ಈ ಸೀಸನ್‌ನ ಕೆಪಿಎಲ್‌ನಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.

**ಮೈಸೂರಿನ ಜೋ ಜೋ ಕ್ರಿಕೆಟ್ ಕ್ಲಬ್‌ನ ಗ್ರೂಪ್ 1 ನ್ನು ಪ್ರತಿನಿಧಿಸುತ್ತಿರುವ ಉತ್ತಮ್ ಅಯ್ಯಪ್ಪ ಅವರು ಆಲ್‌ರೌಂಡರ್ ಆಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ತಂಡದ ಸದಸ್ಯರೂ ಆಗಿರುವ ಉತ್ತಮ್ ಅಯ್ಯಪ್ಪ, ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮತ್ತು ಅಖಿಲ ಭಾರತ ರೋಹಿಂಟನ್ ಬಾರಿಯಾ ಟ್ರೋಫಿಯ ರನ್ನರ್‌ಅಪ್ ಆಗಿದ್ದಾರೆ. ವಿಝ್ಜಿ ಟ್ರೋಫಿಯಲ್ಲಿ ಇವರು ದಕ್ಷಿಣ ವಲಯವನ್ನು ಪ್ರತಿನಿಧಿಸಿದ್ದಾರೆ.**

**ಚೇತನ್ ಎಲ್.ಆರ್. ಅವರು ಸರಸ್ವತಿಪುರಂ ಕ್ರಿಕೆಟ್‌ನ ಸದಸ್ಯರಾಗಿದ್ದು, ವಿಕೆಟ್ ಕೀಪರ್ ಮತ್ತು ಆರಂಭಿಕ ಬ್ಯಾಟ್ಸ್‌ಮನ್ ಆಗಿದ್ದಾರೆ. ಬೆಂಗಳೂರಿನ ಕೆಎಸ್‌ಸಿಎನಲ್ಲಿ ಡಿವಿಶನ್ 2 ರ ಗ್ರೂಪ್ 1 ರಲ್ಲಿ ರಾಜ್ಯ ಜೂನಿಯರ್ ತಂಡವನ್ನು ಪ್ರತಿನಿಧಿಸಿದ್ದ ಚೇತನ್ ಅತ್ಯಧಿಕ ರನ್ ಗಳಿಸಿದ ಬ್ಯಾಟ್ಸ್‌ಮನ್ ಆಗಿದ್ದಾರೆ.**

ಮೈಸೂರು ವಾರಿಯರ್ಸ್ ನಡೆಸಿದ ಪ್ರತಿಭೆ ಅನ್ವೇಷಣೆಯಲ್ಲಿ 535 ಕ್ಕೂ ಹೆಚ್ಚು ಯುವ ಕ್ರಿಕೆಟ್ ಆಕಾಂಕ್ಷಿಗಳು ಪಾಲ್ಗೊಂಡಿದ್ದರು. ಮೈಸೂರು ಎಡಿಶನ್‌ನಲ್ಲಿ 215 ಆಟಗಾರರು ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು. ಇವರಲ್ಲಿ 35 ಬ್ಯಾಟ್ಸ್‌ಮನ್‌ಗಳು, 58 ಆಲ್‌ರೌಂಡರ್‌ಗಳು, 32 ಸ್ಪಿನ್ನರ್‌ಗಳು, 85 ವೇಗದ ಬೌಲರ್‌ಗಳು ಮತ್ತು 5 ಮಂದಿ ವಿಕೆಟ್ ಕೀಪರ್‌ಗಳು ಇದ್ದರು. ಇನ್ನು ಬೆಂಗಳೂರಿನ

ಯಲಹಂಕದಲ್ಲಿರುವ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆದ ಪ್ರತಿಭೆ ಅನ್ವೇಷಣೆಯಲ್ಲಿ 300 ಕ್ಕೂ ಹೆಚ್ಚು ಯುವ ಆಟಗಾರರು ಪಾಲ್ಗೊಂಡಿದ್ದರು. ಇವರಲ್ಲಿ 70 ಮಧ್ಯಮ ವೇಗದ ಬೌಲರ್‌ಗಳು, 50 ಸ್ಪಿನ್ ಬೌಲರ್‌ಗಳು, 75 ಬ್ಯಾಟ್ಸ್‌ಮನ್‌ಗಳು, 80 ಆಲ್‌ರೌಂಡರ್‌ಗಳು ಮತ್ತು 25 ವಿಕೆಟ್ ಕೀಪರ್‌ಗಳಿದ್ದರು.

ಈ ಎಲ್ಲಾ ಆಟಗಾರರ ಪೈಕಿ 50 ಯುವ ಪ್ರತಿಭೆಗಳು ಮಂಡ್ಯದ ಪಿಇಟಿ ಗ್ರೌಂಡ್ಸ್‌ನಲ್ಲಿ 2019 ರ ಜುಲೈ 23 ರಂದು ನಡೆದ ಎರಡು ಹಂತಗಳ ಪರೀಕ್ಷಾರ್ಥ ಪಂದ್ಯದಲ್ಲಿ ಆಟ ಪ್ರದರ್ಶಿಸಿದರು. ಪಂದ್ಯವನ್ನು ಆಡಿದ 50 ಜನರ ಪೈಕಿ ಅಂತಿಮವಾಗಿ 2019 ನೇ ಸಾಲಿನ ಕೆಪಿಎಲ್‌ಗೆ ಮೈಸೂರು ವಾರಿಯರ್ಸ್ ತಂಡಕ್ಕೆ ಆಯ್ಕೆ ಮಾಡಲಾಯಿತು.

**ಈ ಬಗ್ಗೆ ಮಾತನಾಡಿದ ಮೈಸೂರು ವಾರಿಯರ್ಸ್‌ನ ಅರ್ಜುನ್ ರಂಗ ಅವರು,** ''ಮೈಸೂರು ವಾರಿಯರ್ಸ್ ಕ್ರಿಕೆಟ್ ಪ್ರತಿಭಾವಂತರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಭಾಗದಲ್ಲಿ ಪ್ರತಿಭೆ ಅನ್ವೇಷಣೆ ಕಾರ್ಯಕ್ರಮವನ್ನು ಆಯೋಜಿಸಿತ್ತು. ಇಂದು ತಂಡಕ್ಕೆ ಸೇರಬೇಕೆಂಬ ನಿರೀಕ್ಷೆ ಇಟ್ಟುಕೊಂಡು ಬಂದಿದ್ದ ಆಟಗಾರರ ಅಗಾಧ ಪ್ರತಿಭೆಗೆ ಈ ಅನ್ವೇಷಣೆ ಕಾರ್ಯಕ್ರಮ ಸಾಕ್ಷಿಯಾಯಿತು. ಅಂತಿಮವಾಗಿ ಆಯ್ಕೆಯಾಗಿರುವ ಇಬ್ಬರು ಆಟಗಾರರನ್ನು ಮೈಸೂರು ವಾರಿಯರ್ಸ್ ಕುಟುಂಬಕ್ಕೆ ಸ್ವಾಗತಿಸುತ್ತಿದ್ದೇವೆ ಮತ್ತು ಅವರು ಕೆಪಿಎಲ್ ಕ್ರಿಕೆಟ್ ಪಯಣದಲ್ಲಿ ಅತ್ಯುತ್ತಮ ಸಾಧನೆ ತೋರಲಿ ಎಂದು ಹಾರೈಸುತ್ತೇವೆ'' ಎಂದರು.

ಕೆಪಿಎಲ್ 2019 ರ ಸಹ ಪ್ರಾಯೋಜಕ ಸಂಸ್ಥೆಯಾಗಿರುವ ಸೈಕಲ್ ಪ್ಯೂರ್ ಅಗರ್‌ಬತ್ತೀಸ್ ರಾಜ್ಯಾದ್ಯಂತದ ಭರವಸೆಯ ಆಟಗಾರರಿಗೆ ಈ ಬಾರಿ ಆಕರ್ಷಕ ಮತ್ತು ಅಚ್ಚರಿಯ ಬಹುಮಾನಗಳನ್ನು ನೀಡಲಿದೆ.

**ಮೈಸೂರು ವಾರಿಯರ್ಸ್ ಕುರಿತು:** ಮೈಸೂರು ವಾರಿಯರ್ಸ್ ತಂಡ ಕೆಪಿಎಲ್ ಅನ್ನು 2014ರಲ್ಲಿ ಪ್ರವೇಶಿಸಿ ಅದೇ ಆವೃತ್ತಿಯಲ್ಲಿ ಚಾಂಪಿಯನ್ ಆಗಿ ಬೆಳೆಯಿತು. 2014ರಲ್ಲಿ ಮೈಸೂರು ವಾರಿಯರ್ಸ್‌ನ ಇಬ್ಬರು ತಾರಾ ಕ್ರಿಕೆಟಿಗರು ಐಪಿಎಲ್ ಪ್ರವೇಶಿಸಿದರು ಮತ್ತು ಈ ಪರಂಪರೆ ಹಾಗೆಯೇ ಮುಂದುವರೆಯಿತು. ಮೈಸೂರು ವಾರಿಯರ್ಸ್‌ನಿಂದ ಆಯ್ಕೆಯಾದ ಬಹಳಷ್ಟು ಆಟಗಾರರು ಭಾರತದ ಕ್ರಿಕೆಟ್ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಮೈಸೂರು ವಾರಿಯರ್ಸ್ ತಂಡದ ಗೀತೆಯನ್ನು ಜನಪ್ರಿಯ ಸಂಗೀತ ನಿರ್ದೇಶಕ ಶ್ರೀ ರಘು ದೀಕ್ಷಿತ್ ಸಂಯೋಜಿಸಿ ಹಾಡಿದ್ದಾರೆ. ಕಳೆದ ಸರಣಿಯಲ್ಲಿ ಮೈಸೂರು ವಾರಿಯರ್ಸ್‌ಗೆ ದೊರೆತ ಸದೃಢ ಪ್ರಾಯೋಜಕತ್ವ ತಂಡ ಗಳಿಸಿದ ಮಾನ್ಯತೆಗೆ ಸಾಕ್ಷಿಯಾಗಿದೆ. ಇದು ಒಂದೇ ಬಗೆಯ ಆಲೋಚನೆ ಹೊಂದಿರುವ ಸಮಾನ ಮನಸ್ಕ ಜನರನ್ನು ಒಗ್ಗೂಡಿಸಿ ಅವರನ್ನು ಭಾರತದಲ್ಲಿ ಕ್ರೀಡೆಗೆ ಉತ್ತೇಜಿಸಲು ಶ್ರಮಿಸುತ್ತಿದೆ. ಮೈಸೂರು ವಾರಿಯರ್ಸ್ ಯುವ ಕ್ರಿಕೆಟ್ ಪಟುಗಳಿಗೆ ಟಿ–20 ಮಾದರಿಯಲ್ಲಿ ವೃತ್ತಿಪರ ಕ್ರಿಕೆಟ್‌ನ ಅನುಭವವನ್ನು ನೀಡುವ ಜೊತೆಗೆ ಅವರ ಪ್ರತಿಭೆಯನ್ನು ಬೆಳಕಿಗೆ ತರುವ ಪ್ರಯತ್ನದಲ್ಲಿದೆ.

ಮಾಧ್ಯಮ ಸಂಪರ್ಕಕ್ಕೆ: **umabai.ck@nrrs.net or call 91 7022548894**